4	ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ, ರಾಣೆಬೆನ್ನೂರು	4766.61
5	ತುಂಗಭದ್ರಾ ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ, ರಾಣೆಬೆನ್ನೂರು	2387.88
6	ಮಲಪ್ರಭಾ ಸಹಕಾರಿ ನೂಲಿನ ಗಿರಣಿ ನಿಯಮಿತ, ಸವದತ್ತಿ	3375.83
7	ಬೆಳಗಾಂ ಸಹಕಾರಿ ನೂಲಿನ ಗಿರಣಿ ನಿಯಮಿತ, ಬೆಳಗಾಂ	2103.93
8	ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ, ಲಕ್ಷ್ಮೇಶ್ವರ	2749.72
9	ಶ್ರೀ ವೆಂಕಟೇಶ ಸಹಕಾರಿ ನೂಲಿನ ಗಿರಣಿ ನಿಯಮಿತ, ಅಣ್ಣಿಗೇರಿ	3712.41
	ಒಟ್ಟು	**21745.23**

ಆ) 1) ಹುಲಕೋಟಿಯ ಗದಗ ಸಹಕಾರಿ ನೂಲಿನ ಗಿರಣಿಯನ್ನು ರೂ. 920.00 ಲಕ್ಷಗಳ ಯೋಜನಾ ವೆಚ್ಚದಲ್ಲಿ ಆಧುನೀಕರಣಗೊಳಿಸಲಾಗಿದೆ.

2) ಬನಹಟ್ಟಿಯ ಸಹಕಾರಿ ನೂಲಿನ ಗಿರಣಿಯ ಆಧುನೀಕರಣಕ್ಕಾಗಿ ರೂ. 13.05 ಕೋಟಿಗಳು ಮಂಜೂರಾಗಿದ್ದು, ಈ ಪೈಕಿ ರೂ. 3.26 ಕೋಟಿಗಳು ಬಿಡುಗಡೆ ಮಾಡಲಾಗಿರುತ್ತದೆ.

3) ಹುಲಕೋಟಿಯ ದಿ ಫಾರ್ಮರ್ಸ್ ಸಹಕಾರಿ ನೂಲಿನ ಗಿರಣಿಯ ಪುನಃಶ್ಚೇತನ/ನವೀಕರಣ ಯೋಜನೆಯ ಅನುಷ್ಠಾನಕ್ಕಾಗಿ ರೂ. 853.74 ಲಕ್ಷಗಳು ಬಿಡುಗಡೆಯಾಗಿದ್ದು, ಈ ಪೈಕಿ ರೂ. 812.43 ಲಕ್ಷಗಳನ್ನು ಗಿರಣಿಯು ವಿನಿಯೋಗಿಸಿರುತ್ತದೆ.

ಇ) 4,97,199 ದಿನಗಳು.

431 ಶ್ರೀ ಬಾಲಕೃಷ್ಣ ಹೆಚ್.ಸಿ. ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಮೈಸೂರು ರಸ್ತೆಯ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ

ಜ್ಯೇಷ್ಠತೆಯನ್ನು ಕಡೆಗಣಿಸಿ ನೀಡಲಾಗಿದೆ 160ಕ್ಕೂ ಹೆಚ್ಚು ನಿವೇಶನಗಳನ್ನು ರದ್ದುಪಡಿಸಿ ಮರುಹಂಚಿಕೆ ಮಾಡಲಾಗುವುದರಿಂದ ಕಳೆದ ವಿಧಾನಸಭಾ ಅಧಿವೇಶನದಲ್ಲಿ ತಿಳಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ರದ್ದುಪಡಿಸಿರುವ ಹಾಗೂ ಮರುಹಂಚಿಕೆ ಮಾಡಿರುವ ಸದಸ್ಯರ ವಿವರ ನೀಡುವುದು;

ಇ) ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ತಪ್ಪಿತಸ್ಥರ ಸುಮಾರು 6.00 ಕೋಟಿಗೂ ಮೇಲ್ಪಟ್ಟ ಸ್ಥಿರಾಸ್ತಿಗಳನ್ನು ಜಪ್ತಿ ಆದೇಶ ಹೊರಡಿಸಿ ಮುಟ್ಟುಗೋಲು ಹಾಕಿಕೊಳ್ಳಲಾದ ಆಸ್ತಿ ಎಷ್ಟು; (ವಿವರ ನೀಡುವುದು)

ಈ) ಈ ಸಂಘದಲ್ಲಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಇನ್ನೂ ಹಲವಾರು ಪ್ರಕರಣಗಳು ವಿಚಾರಣಾ ಹಂತದಲ್ಲಿದ್ದು, ಇತ್ಯರ್ಥವಾಗಿರುವ ಹಾಗೂ ಇತ್ಯರ್ಥವಾಗದೇ ಇರುವ ಪ್ರಕರಣಗಳ ವಿವರವನ್ನು ನೀಡುವುದು;

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ) ಇಲ್ಲ. ಕಳೆದ ವಿಧಾನಸಭಾ ಅಧಿವೇಶನದಲ್ಲಿ ಸದರಿ ಸಂಘದಲ್ಲಿ ಜ್ಯೇಷ್ಠತೆಯನ್ನು ಕಡೆಗಣಿಸಿ ನೀಡಲಾಗಿದ್ದ 160 ನಿವೇಶನಗಳನ್ನು ರದ್ದುಪಡಿಸಿ ಮರು ಹಂಚಿಕೆ ಮಾಡಲಾಗುವುದೆಂದು ತಿಳಿಸಿರುವುದಿಲ್ಲ.

ಆ) ಸಂಘದ ಆಡಳಿತ ಮಂಡಳಿಯು ಜ್ಯೇಷ್ಠತೆಯನ್ನು ಕಡೆಗಣಿಸಿ ನೀಡಲಾಗಿದ್ದು 150 ನಿವೇಶನಗಳನ್ನು (40 ಮೂಲೆ ನಿವೇಶನಗಳ ಸಹಿತ) ರದ್ದುಪಡಿಸಿ ಜ್ಯೇಷ್ಠತೆಯ ಆಧಾರದ ಮೇಲೆ 110 ನಿವೇಶನಗಳನ್ನು ಮರು ಹಂಚಿಕೆ ಮಾಡಿರುತ್ತದೆ.

ಇ) ಸದರಿ ಅವ್ಯವಹಾರದಲ್ಲಿ ಭಾಗಿಯಾಗಿರುವವರೆ ಈ ಕೆಳಕಂಡ ಸ್ಥಿರಾಸ್ತಿಗಳಿಗೆ ಜಪ್ತಿ ಆದೇಶ ಹೊರಡಿಸಿ ಮುಟ್ಟುಗೋಲು ಹಾಕಿಕೊಂಡಿರುವ ವಿವರ.

ಶ್ರೀ ಡಿ. ರಾಜ್‌ಕುಮಾರ್, ಮಾಜಿ ಅಧ್ಯಕ್ಷರು ಇವರ ಆಸ್ತಿ

1) ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕು ಮರಗೋಡು ಗ್ರಾಮ 15 ಎಕರೆ 78 ಸೆಂಟ್
2) ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕು ಬೇತು ಗ್ರಾಮ 17 ಎಕರೆ 02 ಸೆಂಟ್
3) ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕು ಹೊಡವಾಡ 19 ಎಕರೆ 54 ಸೆಂಟ್

ಶ್ರೀ ಡಿ. ರಾಜ್‌ಕುಮಾರ್ ಮತ್ತು ಶ್ರೀಮತಿ ಡಿ. ಕೋಮಲಾಕ್ಷಿ (ಪತ್ನಿ) ಇವರ ಆಸ್ತಿ

4) ಕೊಡಗು ಜಿಲ್ಲೆ ಮಡಿಕೇರಿ ಟೌನ್ 2 ಎಕರೆ 01 ಸೆಂಟ್
ಒಟ್ಟು 54 ಎಕರೆ 35 ಸೆಂಟ್

ಶ್ರೀ ಎಂ.ವಿ. ರುದ್ರಾಚಾರಿ, ಮಾಜಿ ಉಪಾಧ್ಯಕ್ಷರು ಇವರ ಆಸ್ತಿ

1) ಕೆಂಗೇರಿ ಹೋಬಳಿ ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ. 27ರಲ್ಲಿ 1 ಎಕರೆ $02^{1}/_{2}$ ಗುಂಟೆ

2) ಕೆಂಗೇರಿ ಹೋಬಳಿ ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ. 28ರಲ್ಲಿ 1 ಎಕರೆ 08 ಗುಂಟೆ

3) ಕೆಂಗೇರಿ ಹೋಬಳಿ ಸೊಣ್ಣೇನಹಳ್ಳಿ ಗ್ರಾಮದ ಸರ್ವೆನಂ. 29ರಲ್ಲಿ 0.21 (ಕಟ್ಟಡ ಸಮೂಹ)

4) ಕೆಂಗೇರಿ ಹೋಬಳಿ ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ. 40.2ರಲಿ 2 ಎಕರೆ

ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘವು ಜಮೀನು ಖರೀದಿಸಿ ಕರಾರು ಮಾಡಿಕೊಂಡು, ಜಿಪಿಎ ಪಡೆದು ಮುಂಗಡ ನೀಡಿರುವ ಕೆಂಗೇರಿ ಗ್ರಾಮದ ವಿವಿಧ ಸರ್ವೆ ನಂ. ಗಳಲ್ಲಿ 7 ಎಕರೆ 08 ಗುಂಟೆ ಜಮೀನು.

ಶ್ರೀಮತಿ ಎಸ್.ಬಿ. ನಾಗರತ್ನಮ್ಮ ಕೋಂ ಎಂ.ವಿ.ರುದ್ರಾಚಾರಿ ಅವರ ಆಸ್ತಿ

8) ಬೆಂಗಳೂರು ನಗರ ವಿಜಯನಗರದಲ್ಲಿ 55x40 ವಿಸ್ತೀರ್ಣದ ನಿವೇಶನದಲ್ಲಿ 27 ಚದರಡಿಯ 2 ಅಂತಸ್ತಿನ ಮನೆ

ಈ) ಇತ್ಯರ್ಥವಾದ ಪ್ರಕರಣ

2000–01ನೇ ಸಾಲಿನಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ಆದೇಶ ಸಂಖ್ಯೆ: ಜೆಆರ್‌ಬಿ/ಪರಿವೀಕ್ಷಣೆ/38/2000–01, ದಿನಾಂಕ 16–1–2000ರ ಅನ್ವಯ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 65ರಡಿ ಪರಿವೀಕ್ಷಣೆ ನಡೆಸಲು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರು ಸಹಕಾರ ಸಂಘಗಳ ಉಪ ನಿಬಂಧಕರು–1, ಬೆಂಗಳೂರು ನಗರ ಜಿಲ್ಲೆ, ಇವರನ್ನು ಪರಿವೀಕ್ಷಣಾ ಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಿರುತ್ತಾರೆ. ಈ ಸಂಬಂಧ ವರದಿಯನ್ನು ಸಲ್ಲಿಸಿದ್ದು, ಪ್ರಕರಣ 68ರಲ್ಲಿ ಸಹಕಾರ ಸಂಗಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರಿಂದ ದಿನಾಂಕ 2–8–2001ರಂದು ಸಂಘಕ್ಕೆ ನಿರ್ದೇಶನ ನೀಡಲಾಗಿರುತ್ತದೆ. ತದನಂತರ ಪ್ರಕರಣ 69ರಡಿ ಉಪ

ನಿಬಂಧಕರು-1, ಬೆಂಗಳೂರು ಅವರು ಸಂಘದ ಹಿಂದಿನ ಅಧ್ಯಕ್ಷರಾಗಿದ್ದ ಶ್ರೀ ಡಿ.ರಾಜಕುಮಾರ್ ಹಾಗೂ ಉಪಾಧ್ಯಕ್ಷರಾಗಿದ್ದ ಶ್ರೀ ಎಂ.ವಿ. ರುದ್ರಾಚಾರಿ ಹಾಗೂ ಇತರರ ವಿರುದ್ಧ ಒಟ್ಟು 4,59,69,000/- ಗಳ ಹಣ ವಸೂಲಾತಿಗೆ ಸಂಬಂಧಿಸಿದಂತೆ ಅವಾರ್ಡ್ ಮಾಡಿದ್ದು ಸದರಿಯವರ ಆಸ್ತಿಯನ್ನು ಹರಾಜು ಮಾಡಲು ಹಲವಾರು ಬಾರಿ ದಿನಾಂಕ ನಿಗದಿಪಡಿಸಿ ಬಿಡ್ದುದಾರರು ಬಾರದಿದ್ದರಿಂದ ಸಂಘದ ಹೆಸರಿಗೆ ನಿಲ್ಲಿಸಲಾಗಿದೆ.

ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು

1. ಸಂಘದ 1998-99 ಮತ್ತು 1999-2000ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸಂಘದ ಆಗಿನ ಪದಾಧಿಕಾರಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರುಗಳು ರೂ. 1,90,14,213/-ಗಳ ಹಣ ದುರುಪಯೋಗಪಡಿಸಿಕೊಂಡಿರುವುದು ವರದಿಯಾಗಿದ್ದು, ಈ ಹಣ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಪ್ರಕರಣ 69ರಡಿ ಅಧಿಭಾರ ಪ್ರಕರಣ ದಾಖಲಾಗಿರುತ್ತದೆ. ಈ ಪ್ರಕರಣವನ್ನು ಸಹಕಾರ ಸಂಘಗಳ ಉಪ ನಿಬಂಧಕರು, ಬೆಂಗಳೂರು ನಗರ ಜಿಲ್ಲೆ ಇವರ ನ್ಯಾಯಾಲಯದಲ್ಲಿ ದಿನಾಂಕ 6-10-2005ರಂದು ದಾಖಲಿಸಿಕೊಂಡು ವಿಚಾರಣೆಯಲ್ಲಿದೆ.

   ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಪ್ರಕರಣ 103(1)ರ ಅನ್ವಯ ನೋಟೀಸು ನೀಡಿ ಹಿಂದಿನ ಪದಾಧಿಕಾರಿಗಳ ಸ್ಥಿರಾಸ್ತಿಗಳನ್ನು ಅಟ್ಯಾಚ್ ಮಾಡಲು ದಿನಾಂಕ 2-2-2009ರಂದು ಕ್ರಮವಿಟ್ಟಿದ್ದು, ಇದರ ಸ್ಥಿರೀಕರಣಕ್ಕಾಗಿ ಕಾಲಾವಕಾಶ ನೀಡದೆ. ಈ ಪ್ರಕರಣವು ವಾದ ಮಂಡನೆಗಾಗಿ ಬಾಕಿ ಇದ್ದು, ವಿಚಾರಣೆ ಪ್ರಗತಿಯಲ್ಲಿದೆ.

2. ಸಂಘದ ಹಿಂದಿನ ಪದಾಧಿಕಾರಿಯಾಗಿದ್ದ ಶ್ರೀ ಎಂ.ವಿ. ರುದ್ರಾಚಾರಿ ಇವರಿಗೆ ಸಂಬಂಧಿಸಿದ ಆಸ್ತಿ ಸಂ. 41, 1ನೇ ಮೇನ್, ಅತ್ತಿಗುಪ್ಪೆ, ಬೆಂಗಳೂರು ಇದನ್ನು ಸಂಘಕ್ಕೆ ವರ್ಗಾಯಿಸಬಾರದೆಂದು ಇವರ ವಾರಸುದಾರರಾದ ಶ್ರೀಮತಿ ಬಿ.ಆರ್. ಲತಾ ಇವರು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 106ರ ಅನ್ವಯ ಸಹಕಾರ ಸಂಘಗಳ ಉಪ ನಿಬಂಧಕರು-2, ಬೆಂಗಳೂರು ನಗರ ಜಿಲ್ಲೆ ಈ ನ್ಯಾಯಾಲಯದಲ್ಲಿ ದಿನಾಂಕ 4-1-2007ರಂದು ಮೇಲ್ಮನವಿಯನ್ನು

ದಾಖಲಿಸಿರುತ್ತಾರೆ. ಈ ಪ್ರಕರಣದ ವಿಚಾರಣೆಯು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮುಕ್ತಾಯವಾಗಿದ್ದು, ಆದೇಶಕ್ಕಾಗಿ ಕಾಯ್ದಿರಿಸಲಾಗಿದೆ. ಈ ಪ್ರಕರಣದ ಆದೇಶಕ್ಕಾಗಿ ದಿನಾಂಕ 24–7–2009ರಂದು ನಿಗದಿಯಾಗಿರುತ್ತದೆ.

3. ಇದೇ ಪದಾಧಿಕಾರಿಯ ಮತ್ತೊಂದು ಆಸ್ತಿ ಸೊಣ್ಣೇನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 29/1, ಖಾತೆ ಸಂಖ್ಯೆ: 59 ಇದರ ವರ್ಗಾವಣೆ ಬಗ್ಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 2ನೇ ವಲಯ, ಬೆಂಗಳೂರು ಇವರು ದಿನಾಂಕ 22–2–2008ರಂದು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಶ್ರೀ ಎಸ್. ಶಿವಶಂಕರ್ ಇವರು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಪ್ರಕರಣ 106ರ ಅನ್ವಯ ದಿನಾಂಕ 11–7–2008ರಂದು ಈ ನ್ಯಾಯಾಲಯದಲ್ಲಿ ಮೇಲ್ಮನವಿಯೊಂದನ್ನು ಸಲ್ಲಿಸಿರುತ್ತಾರೆ. ಈ ಮೇಲ್ಮನವಿಯ ಸಿಂಧುತ್ವದ ಬಗ್ಗೆ ಪ್ರಶ್ನಿಸಿದ್ದು, ವಿಚಾರಣೆ ಪೂರ್ಣಗೊಂಡಿದ್ದು ದಿನಾಂಕ 24–7–2009ಕ್ಕೆ ಆದೇಶಕ್ಕಾಗಿ ಕಾಯ್ದಿರಿಸಲಾಗಿದೆ.

4. ಸಂಘದ ಹಿಂದಿನ ಆಡಳಿತ ಮಂಡಳಿಯವರು ಹಿರಿಯ ಸದಸ್ಯರ ಜ್ಯೇಷ್ಠತೆಯನ್ನು ಕಡೆಗಣಿಸಿ ಕಿರಿಯ ಸದಸ್ಯರಿಗೆ ಹಂಚಿಕೆ ಮಾಡಿದಂತಹ ಸುಮಾರು 150 ನಿವೇಶನಗಳನ್ನು ಸಂಘದ ಹಾಲಿ ಆಡಳಿತ ಮಂಡಳಿಯವರು ರದ್ದುಗೊಳಿಸಿದ್ದು, ಈ ರದ್ದತಿ ಕ್ರಮವನ್ನು ಪ್ರಶ್ನಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 70ರಡಿ 184 ದಾವಾ ಪ್ರಕರಣಗಳು ದಾಖಲಾಗಿರುತ್ತದೆ.

ಈ ಪೈಕಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿಯಮ 441 ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇವರಿಗೆ 135 ದಾವಾ ಪ್ರಕರಣಗಳನ್ನು ಸರ್ಕಾರದ ಸೂಚನೆಯಂತೆ ಇತ್ಯರ್ಥಕ್ಕಾಗಿ ವರ್ಗಾಯಿಸಲಾಗಿದೆ. ಈ ಪೈಕಿ 20 ಪ್ರಕರಣಗಳಲ್ಲಿ ವಾದಿಗಳೇ ಮತ್ತೊಂದು ಪ್ರಕರಣಗಳಲ್ಲಿ ಪ್ರತಿವಾದಿಗಳು ಆಗಿರುವುದರಿಂದ ಸಿಂಧುತ್ವ ಇಲ್ಲವೆಂದು ಪರಿಗಣಿಸಿ ವಿಲೇವಾರಿ ಮಾಡಿರುತ್ತಾರೆ. ಉಳಿದ 115 ಪ್ರಕರಣಗಳು ಸದರಿ ನ್ಯಾಯಾಲಯದಲ್ಲಿ ವಿವಿಧ ಹಂತಗಳಲ್ಲಿ ವಿಚಾರಣೆಯಲ್ಲಿದ್ದು, ವಿಚಾರಣೆ ಪ್ರಗತಿಯಲ್ಲಿರುತ್ತವೆ.

ತರುವಾಯ ದಾಖಲಾದ 49 ವ್ಯಾಜ್ಯ ಪ್ರಕರಣಗಳನ್ನು ವಿಲೇವಾರಿಗಾಗಿ ಸರ್ಕಾರದ ಸೂಚನೆಯಂತೆ ಸಮಾಪಕರು ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿಯಮ 441, ಕಂಟ್ರಾಕ್ಟರ್ ಕೋ–ಆಪರೇಟಿವ್ ಬ್ಯಾಂಕ್ ನಿ, ಬೆಂಗಳೂರು ಇವರಿಗೆ ಇತ್ಯರ್ಥಕ್ಕಾಗಿ ವಹಿಸಲಾಗಿದ್ದು, ಸದರಿ ಪ್ರಕರಣಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.

ತದನಂತರ ದಾಖಲಾದ 11 ಪ್ರಕರಣಗಳು ಸಹಕಾರ ಸಂಘಗಳ ಉಪ ನಿಬಂಧಕರು–2 ಇವರ ನ್ಯಾಯಾಲಯದಲ್ಲಿ ವಿವಿಧ ಹಂತಗಳಲ್ಲಿ ವಿಚಾರಣೆಯಲ್ಲಿರುತ್ತವೆ.

1017 ಶ್ರೀ ಸುನೀಲ್ ವಿ. ಹೆಗಡೆ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ್ಲಲಿ 800 ಹೆ. ನಷ್ಟು ಪ್ರದೇಶದಲ್ಲಿ ಬೆಳೆದ ಭತ್ತದ ಬೆಳೆಯು ಬೆಂಕಿ ರೋಗದಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರೈತರಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸದರಿ ತಾಲ್ಲೂಕಿನಲ್ಲಿ 2001–02ನೇ ಸಾಲಿನಲ್ಲಿ ಬರಗಾಲ ಉಂಟಾಗಿ ರೈತರು ಬೆಳೆದ ಬೆಳೆ ಹಾನಿಯಾಗಿದ್ದು, ಅಲ್ಲಿನ ರೈತರು ಸಂಕಷ್ಟಕ್ಕೀಡಾಗಿದ್ದುದ್ದು ನಿಜವೇ; ಹಾಗಿದ್ದಲ್ಲಿ ಈ ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ;

ಈ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಮೊತ್ತವನ್ನು ಪರಿಹಾರವಾಗಿ ನೀಡಲಾಗಿದೆ;

ಉ) ರೈತರು ಬೆಳೆದ ಬೆಳೆಗಳಿಗೆ ಬೆಳೆ ವಿಮೆಯ ಹಣವನ್ನು ಪಾವತಿಸಿದ್ದರೂ ಈವರೆಗೆ ಬೆಳೆವಿಮೆಯ ಹಣ ರೈತರಿಗೆ ಹಂಚಿಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ರೈತರಿಗೆ ಯಾವಾಗ ಪರಿಹಾರ ಧನವನ್ನು ನೀಡಲಾಗುವುದು ಮತ್ತು ಎಷ್ಟು ಪ್ರಮಾಣದ ಪರಿಹಾರವನ್ನು ನೀಡಲಾಗುವುದು; (ವಿವರ ನೀಡುವುದು)?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಅ) ಹೌದು. ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನಲ್ಲಿ ಒಟ್ಟು 269.22 ಹೆ. ಪ್ರದೇಶದಲ್ಲಿ ಮಾತ್ರ ಭತ್ತದ ಬೆಳೆಗೆ ಬೆಂಕಿ ರೋಗವು ತಗುಲಿ ಬೆಳೆಯು ಹಾನಿಯಾಗಿರುವುದೆಂದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇಲಾಖೆಯಿಂದ ಸಸ್ಯ ಸಂರಕ್ಷಣಾ ರಾಸಾಯನಿಕಗಳನ್ನು ಸಹಾಯಧನದಲ್ಲಿ ರೈತರಿಗೆ ವಿತರಿಸಲಾಗಿದ್ದು, ಹೆಚ್ಚಿನ ಪರಿಹಾರಕ್ಕಾಗಿ ಕಂದಾಯ ಇಲಾಖೆಗೆ ವರದಿಯನ್ನು ಸಲ್ಲಿಸಲಾಗಿರುತ್ತದೆ.

ಇ) ಹೌದು. 2001–02ನೇ ಸಾಲಿನಲ್ಲಿ ಜೊಯಿಡಾ ತಾಲ್ಲೂಕಿನ 1266 ರೈತರಿಗೆ ಬೆಳೆ ಹಾನಿಯಾದ ಬಗ್ಗೆ ಬೆಳೆ ವಿಮೆಯನ್ನು ನೀಡಲಾಗಿದೆ.

ಈ) ಬೆಳೆ ಹಾನಿಯ ಬಗ್ಗೆ ರೂ. 5,81,599.45 (ಐದು ಲಕ್ಷ ಎಂಬತ್ತೊಂದು ಸಾವಿರದಾ ಐದು ನೂರಾ ತೊಂಬತ್ತೊಂಬತ್ತು ರೂಪಾಯಿ ನಲವತ್ತ ಐದು ಪೈಸೆಗಳು ಮಾತ್ರ) ಬೆಳೆ ವಿಮೆ ನೀಡಲಾಗಿದೆ.

ಉ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ವಿಮಾ ಸಂಸ್ಥೆಯು 2008ರ ಮುಂಗಾರು ಹಂಗಾಮಿನಲ್ಲಿ ಭತ್ತ ಮತ್ತು ನೆಲಗಡಲೆ (ಶೇಂಗಾ) ಬೆಳೆಗಳನ್ನು ಹೊರತುಪಡಿಸಿ ಉಳಿದ ಬೆಳೆಗಳಿಗೆ ಜುಲೈ 2009ರ ಮೊದಲ ವಾರ ನೋಡಲ್ ಬ್ಯಾಂಕುಗಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಬಿಡುಗಡೆ ಮಾಡಿರುತ್ತಾರೆ. ನೋಡಲ್ ಬ್ಯಾಂಕುಗಳಿಂದ ಹಣವು ಶಾಖೆಗಳಿಗೆ ಬಿಡುಗಡೆಯಾಗಿ ಶೀಘ್ರದಲ್ಲೆ ರೈತರ ಖಾತೆಗೆ ಜಮಾ ಆಗಲಿದೆ. ಭತ್ತ ಮತ್ತು ನೆಲಗಡಲೆ (ಶೇಂಗಾ) ಬೆಳೆಗಳಿಗೆ ಶೀಘ್ರದಲ್ಲೆ ವಿಮಾ ಸಂಸ್ಥೆಯು ನೋಡಲ್ ಬ್ಯಾಂಕುಗಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಬಿಡುಗಡೆ ಮಾಡಲಿದೆ.

ಊ) 2008ರ ಮುಂಗಾರು ಹಂಗಾಮಿನಲ್ಲಿ ಜೋಯಿಡಾ ತಾಲ್ಲೂಕಿನ ಎಲ್ಲಾ ಹೋಬಳಿಗಳಲ್ಲಿ ಭತ್ತ (ಮಳೆ ಆಶ್ರಿತ) ಬೆಳೆಗೆ ಬೆಳೆ ಕಟಾವು ಪ್ರಯೋಗಗಳಿಂದ ಕಂಡು ಹಿಡಿಯಲಾದ ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಹೆಚ್ಚಾಗಿರುವುದರಿಂದ, ಈ ತಾಲ್ಲೂಕಿನಲ್ಲಿ ಈ ಬೆಳೆಗೆ ವಿಮೆ ಮಾಡಿಸಿದ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಿರುವುದಿಲ್ಲ. ವಿವರಗಳು ಈ ಕೆಳಕಂಡಂತಿವೆ.

ಹೋಬಳಿ	ಪ್ರಾರಂಭಿಕ ಇಳುವರಿ (ಕೆ.ಜಿ./ಹೆ.)	ವಾಸ್ತವಿಕ ಇಳುವರಿ (ಕೆ.ಜಿ./ಹೆ.)
ಕ್ಯಾಸೆಲ್ ರಾಕ್	1589	2196
ಕುಂಬಾರವಾಡ	1624	1904
ಸೂಪಾ (ಜೋಯಿಡಾ)	1763	2103

1016 ಶ್ರೀ ಸುನೀಲ್ ವಿ. ಹೆಗಡೆ ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಶಿರಸಿ ಕೆಡಿಸಿಸಿ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರಗಳನ್ನು ತನಿಖೆ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ತನಿಖೆಗೆ ಆದೇಶಿಸುವುದೇ; ಯಾವ ರೀತಿಯ ತನಿಖೆಗೆ ಆದೇಶಿಸಲಾಗುವುದು;

ಇ) ಈಗಿರುವ ಕೆಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಯನ್ನು ವಿಸರ್ಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಈ ಆಡಳಿತ ಮಂಡಳಿಯನ್ನು ಎಂದಿನಿಂದ ವಿಸರ್ಜಿಸಲಾಗುವುದು;

ಉ) ವಿಸರ್ಜನೆಯಾದ ನಂತರ ಆಡಳಿತಾಧಿಕಾರಿಯನ್ನು ನೇಮಿಸ ಲಾಗುವುದೇ ಅಥವಾ ಚುನಾವಣೆ ನಡೆಸಲಾಗುವುದೇ? (ವಿವರ ನೀಡುವುದು)

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ,ಆ) ಉತ್ತರ ಕನ್ನಡ ಜಿಲ್ಲೆಯ ಕೆನರಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಶಿರಸಿ ಈ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಬೆಳಗಾವಿ ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64ರಡಿ ವಿಚಾರಣೆಯನ್ನು ದಿನಾಂಕ 15–1–2009ರಂದು ಆದೇಶಿಸಿ ನಿವೃತ್ತ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಎಸ್.ಎಸ್. ಶಿಂತ್ರಿ ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು ವಿಚಾರಣೆಯನ್ನು ದಿನಾಂಕ 31–8–2009ರೊಳಗೆ ಮುಕ್ತಾಯ ಗೊಳಿಸಲು ಅವಕಾಶ ನೀಡಲಾಗಿರುತ್ತದೆ.

ಇ) ಇಲ್ಲ.